# ಆಂಧ್ರಪ್ರದೇಶದಲ್ಲಿ ಬೌದ್ಧಧರ್ಮದ ಉಗಮ ಮತ್ತು ವಿಕಾಸ.

**ತೆಲುಗು ಮೂಲ:**
ಡಾ. ಬಿ. ಎಸ್. ಎಲ್. ಹನುಮಂತರಾವ್

**ಕನ್ನಡಾನುವಾದ:**
ಡಾ. ಎಂ. ಭೈರಪ್ಪ
ಕನ್ನಡ ಸಹಾಯಕ ಪ್ರಾಧ್ಯಾಪಕರು
ಮಾನವಿಕ ಮತ್ತು ಭಾಷಾ ವಿಭಾಗ
ಕ್ರಿಸ್ತು ಜಯಂತಿ ಕಾಲೇಜು (ಸ್ವಾಯತ್ತ)
ಕೆ.ನಾರಾಣಪುರ, ಕೊತ್ತನೂರು ಪೋಸ್ಟ್,
ಬೆಂಗಳೂರು–560 077.

**Article Link: https://aksharasurya.com/2023/08/byrappa-m/**

**ABSTRACT:**

**Original Telugu work:** Andhradeshamlo Jaina, Bouddh Mataalu (Kannada Translation- Andhra Pradeshadalli Jaina Bouddha Dharmagalu) (In English: Jaina and Bouddha Religions in Andhra Pradesh); Original Author: Dr. B.S.L.Hanumantha Rao. He did valuable contributions to Telugu literature, especially in the field of Buddhism and Archaeology. The present work has its own importance in his important literary series. The reason why the translation of the present work is relevant is to raise awareness and validate the influence of Jainism and Buddhism, the major philosophical roots of India, in the southern states like Andhra and Karnataka; To understand the importance of philosophical movement across linguistic boundaries and cross-linguistic ties in ancient India to the phenomenon of linguistic territorialisation of modern India; To review the unique contributions made by a regional base in shaping the theological and philosophical contours of all Indian Jain-Buddhism; The current Telugu version of the work contains many novelties. Hence the translation of this work is very important and relevant to cul-

tural research between Kannada and Telugu.

**KEYWORDS:** ಆಂಧ್ರಪ್ರದೇಶ, ಬೌದ್ಧಧರ್ಮ, ಗೋದಾವರಿ, ಶಾತವಾಹನ, ಶಾತಕರ್ಣಿ, ವನವಾಸ, ಸುತ್ತನಿಪಾತ, ಅಶೋಕ, ಭಟ್ಟಿಪ್ರೋಲು, ಧಾನ್ಯಕಟಕ, ಅಮರಾವತಿ, ಸರ್ವಸಮ–ವಿಶ್ವಾತ್ಮಕ.

ಆಂಧ್ರಪ್ರದೇಶದಾದ್ಯಂತ – ಶಾಲಿಹುಂಡಂ(ಶ್ರೀಕಾಕುಳಂ ಜಿಲ್ಲೆ)ದಿಂದ ರಾಮತೀರ್ಥ (ಪ್ರಕಾಶಂ ಜಿಲ್ಲೆ) ವರೆಗೆ, ಪಶ್ಚಿಮಾಂಧ್ರದ ಧೂಳಿಕಟ್ಟಾ (ಕರೀಂನಗರ ಜಿಲ್ಲೆ) ಆದಾಪುರ (ಕಡಪ ಜಿಲ್ಲೆ) ವರೆಗೆ ಕರಾವಳಿಯುದ್ದಕ್ಕೂ ಇರುವ ಹಲವಾರು ಬೌದ್ಧತಾಣಗಳ ಅವಶೇಷಗಳು ಬೌದ್ಧಧರ್ಮದ ವ್ಯಾಪಕ ಜನಪ್ರಿಯತೆಗೆ ಮೂಕಸಾಕ್ಷಿಯಾಗಿವೆ. ಕ್ರಿಸ್ತಪೂರ್ವ 5, 4ನೇ ಶತಮಾನವು ಆಂಧ್ರಪ್ರದೇಶದಲ್ಲಿ ಆರ್ಯೇತರ ಜನಾಂಗಗಳು ಮತ್ತು ಸಂಸ್ಕೃತಿಗಳು ವಿಲೀನಗೊಳ್ಳುತ್ತಿದ್ದ ಸಮಯ. ಆಂಧ್ರರು ಮೂಲತಃ ಆರ್ಯರಲ್ಲ ಎಂದು ಬ್ರಾಹ್ಮಣ ವಾಙ್ಮಯವು ಮುಕ್ತಕಂಠದಿಂದ ಹೇಳುತ್ತದೆ. ಆದಾಗ್ಯೂ, ಆರ್ಯ ಸಂಸ್ಕೃತದ ಸ್ಥಾನವಾದ ಉತ್ತರಾಪಥಕ್ಕೆ ಸಮೀಪದಲ್ಲಿರುವುದರಿಂದ ಆಂಧ್ರಪ್ರದೇಶದ ಮೇಲೆ ಆರ್ಯ ಸಂಸ್ಕೃತಿ ಪ್ರಭಾವವು ಬಹಳ ಪ್ರಾಚೀನ ಕಾಲದಿಂದಲೂ ಆಗಿದೆ. ಆಂಧ್ರಪ್ರದೇಶದಿಂದ ಮಗಧ ಮತ್ತು ಕೋಸಲ ಪ್ರದೇಶಗಳಿಗೆ ಸಂಚಾರದ ಸೂಚನೆಗಳಿರುವುದಕ್ಕೆ ದಾಖಲೆಗಳಿವೆ. ಬೌದ್ಧಗ್ರಂಥಗಳಲ್ಲಿ ಆಂಧ್ರಜಾನಪದ ಎಂದು ಉಲ್ಲೇಖಿಸಲಾದ ಅಸ್ಸಕ ಮತ್ತು ಮುಲಕ ರಾಜ್ಯಗಳನ್ನು ಇಕ್ಷ್ವಾಕು ರಾಜಕುಮಾರರು ನಿರ್ಮಿಸಿದರು ಎಂದು ವಿಷ್ಣುಪುರಾಣದಿಂದ ತಿಳಿದುಬಂದಿದೆ. 'ಸುತ್ತನಿಪಾತ'ದಲ್ಲಿ, ಬ್ರಾಹ್ಮಣ ವಿದ್ವಾಂಸರಾದ ಬವರಿ ಇಕ್ಷ್ವಾಕುಲ ಕುಲಗುರುಗಳು ಈ ಜನಪದಗಳ ಗಡಿಯಲ್ಲಿ ಗೋದಾವರಿ ದಡದಲ್ಲಿ ಆಶ್ರಮವನ್ನು ನಿರ್ಮಿಸಿದರು ಎಂಬ ಸಂಗತಿಯಿದೆ. ಇನ್ನೊಬ್ಬ ಇಕ್ಷ್ವಾಕು ರಾಜಕುಮಾರ ಯಶೋಧರ್ಮನು ದಕ್ಷಿಣಕ್ಕೆ ವಲಸೆ ಬಂದು ವೆಂಗಿರಾಜ್ಯದಲ್ಲಿ ಪ್ರತಿಪಾಲಪುರ ರಾಜ್ಯವನ್ನು ನಿರ್ಮಿಸಿದನೆಂದು ಜೈನ ವಾಙ್ಮಯ ತಿಳಿಸುತ್ತದೆ. ಕಾತ್ಯಾಯನ (ವ್ಯಾಕರಣಕಾರ, ಕ್ರಿ.ಪೂ. 4ನೇ ಶತಮಾನ) ಮತ್ತು ಕೌಟಿಲ್ಯ (ಕ್ರಿ.ಪೂ. 4ನೇ ಶತಮಾನದ 'ಅರ್ಥಶಾಸ್ತ್ರ' ರಚನಕಾರ) ದಾಕ್ಷಿಣಾತ್ಯರೆಂದು ವಾದಿಸಲಾಗಿದೆ. ಇದರಲ್ಲಿ ಸತ್ಯವಿದೆ ಎಂದು ಒಪ್ಪಿಕೊಳ್ಳುವುದಾದರೆ, ಅಂದಿಗೆ ದಕ್ಷಿಣಾಪಥದಲ್ಲಿ ವೈದಿಕ ಸಂಸ್ಕೃತಿ ಮತ್ತು ಸಂಸ್ಕೃತ ವಿಜ್ಞಾನಗಳ ಪ್ರಮಾಣವನ್ನು ಗ್ರಹಿಸಬಹುದಾಗಿದೆ.

ಕಥಾಸರಿತ್ಸಾಗರದ ಪ್ರಕಾರ, ಶಾತವಾಹನರ ಮೂಲಪುರುಷನು ಸಾತುನೆಂಬ ಯಕ್ಷನಿಗೆ ಹಾಗೂ ಬ್ರಾಹ್ಮಣ ಮಹಿಳೆಗೆ ಜನಿಸಿದವನು. ಶಾತವಾಹನರ

ಮಂತ್ರಿಯಾದ ಗುಣಾಢ್ಯನು ಬ್ರಾಹ್ಮಣ ಮಹಿಳೆ ಮತ್ತು ಅನಂತನೆಂಬ ನಾಗಾ ಯುವಕನಿಗೆ ಜನಿಸಿದನೆಂದು 'ಸಿಂಹಾಸನ ದ್ವಾತ್ರಿಂಶಿಕ'ದಿಂದ ತಿಳಿಯುತ್ತೇವೆ. ಈ ಗಾಥೆಗಳು ಮತ್ತು ಸಂಪ್ರದಾಯಗಳು ಆಂಧ್ರಪ್ರದೇಶವು ಅಂದು ಆರ್ಯ–ಆರ್ಯೇತರ ಸಾಂಸ್ಕೃತಿಕ ಸಮ್ಮಿಲನಕ್ಕೆ ವೇದಿಕೆಯಾಗಿತ್ತು ಎಂದು ಸೂಚಿಸುತ್ತದೆ. ಆಪಸ್ತಂಬನ (ಕ್ರಿ.ಪೂ. 4ನೇ ಶತಮಾನ) ಧರ್ಮಸೂತ್ರಗಳು ಈ ಸಾಂಸ್ಕೃತಿಕ ಸಂಯೋಜನೆಯನ್ನು ಪ್ರತಿಬಿಂಬಿಸುತ್ತವೆ. ಆದಾಗ್ಯೂ, ಆರ್ಯ ಸಂಸ್ಕೃತಿಯ ವಿಸ್ತರಣೆಗೆ ದಕ್ಷಿಣದಲ್ಲಿ ಬಲವಾದ ಪ್ರತಿರೋಧದ ಯಾವುದೇ ಸೂಚನೆಗಳಿಲ್ಲದಿಲ್ಲ. ವಾತಾಪಿ, ಇಲ್ವಲ, ಮಾರೀಚ ಮತ್ತು ಸುಬಾಹು ಕಥೆಗಳಿಗೇ ಇದಕ್ಕೆ ನಿದರ್ಶನ. ಶಬರಿಯು ಪರಿವ್ರಾಜಕಿಯಾಗಿದ್ದಳು ಮತ್ತು ರಾವಣನು ಪರಿವ್ರಾಜಕ ರೂಪದಲ್ಲಿ ಸೀತೆಯನ್ನು ಸಮೀಪಿಸಿದನೆಂಬ ರಾಮಾಯಣ ವರ್ಣನೆಗಳು ಆರ್ಯೇತರರಲ್ಲಿ 'ಪರಿವ್ರಾಜಕ ಸಂಪ್ರದಾಯ'ದ ಜನಪ್ರಿಯತೆಯನ್ನು ಸೂಚಿಸುತ್ತದೆ. ಸುತ್ತನಿಪಾತ ಮತ್ತು ಮಹಾವಸ್ತು ಕೃತಿಗಳಲ್ಲಿ ಕಂಡುಬರುವ 'ಸಭಿಯ' ಕಥೆ, ಮಜ್ಜಿಮಾನಿಕಾಯದಲ್ಲಿ ಕೌಸ್ಥಿಲನ ಕಥೆಗಳು ದಕ್ಷಿಣದೇಶದಲ್ಲಿ ಆಧ್ಯಾತ್ಮಿಕ ಸಂಚಲನೆಯನ್ನು, ಚಾರ್ವಾಕ ದರ್ಶನದ ಜನಪ್ರಿಯತೆಯನ್ನು ಪ್ರತಿಬಿಂಬಿಸುತ್ತವೆ. ಎರ್ರಗುಡಿ ಮತ್ತು ರಾಜರ ಮಂದಗಿರಿಯಲ್ಲಿ ದೊರೆತ ಅಶೋಕನ ಶಾಸನಗಳು ಕೂಡ ಆಂಧ್ರರನ್ನು ಅನಾಗರಿಕ ಹಂತದಲ್ಲಿದ್ದರೆಂಬುದಕ್ಕೆ ಅವಕಾಶವನ್ನು ನೀಡುವುದಿಲ್ಲ. ಈ ಸಾಮಾಜಿಕ ಮತ್ತು ಸಾಂಸ್ಕೃತಿಕ ಸನ್ನಿವೇಶದಲ್ಲಿ ಬೌದ್ಧಧರ್ಮವು ಆಂಧ್ರಪ್ರದೇಶವನ್ನು ಪ್ರವೇಶಿಸಿತು. ಬೌದ್ಧಧರ್ಮವು ಅನಾರ್ಯ ಜನರ ನಡುವೆ ವೇಗವಾಗಿ ಹರಡಿತು ಎಂದು ಎಲ್ಲಾ ಇತಿಹಾಸಕಾರರು ಒಪ್ಪುತ್ತಾರೆ. ಆಂಧ್ರಪ್ರದೇಶದಲ್ಲಿ ನಾಗ ಮತ್ತು ಯಕ್ಷ ಬುಡಕಟ್ಟು ಜನಾಂಗದವರು ಬೌದ್ಧಧರ್ಮಕ್ಕೆ ವಿಶೇಷ ಆದರವನ್ನು ತೋರಿಸಿದರು.

ಆಂಧ್ರಪ್ರದೇಶದಲ್ಲಿ, ಗೋದಾವರಿ ಮತ್ತು ಕೃಷ್ಣಾ ನದಿ ಮುಖಜಭೂಮಿಗಳ ಉದ್ದಕ್ಕೂ ಇರುವ ನದಿಕಣಿವೆಗಳು ಸಸ್ಯಸಂಪತ್ತಿನಿಂದ ಸೊಂಪಾಗಿದ್ದವು. ತೆಲಂಗಾಣ ಮತ್ತು ರಾಯಲಸೀಮೆ ಪ್ರದೇಶಗಳಲ್ಲಿ ಖನಿಜ ಸಂಪತ್ತು ಹೇರಳವಾಗಿದೆ. ಕೊಂಡಾಪುರದಲ್ಲಿ (ಮೇದಕ್ ಜಿಲ್ಲೆ), ಕ್ರಿಸ್ತಪೂರ್ವ ಮೂರನೇ ಶತಮಾನಕ್ಕೆ ಹಿಂದಿನ ಕಬ್ಬಿಣದ ಹೊದಿಕೆಯ ನೆಲಮಾಳಿಗೆಗಳು ಪತ್ತೆಯಾಗಿವೆ. ಆಂಧ್ರಪ್ರದೇಶದ ಅಸಂಖ್ಯಾತ ದೈತ್ಯಾಕಾರದ ಗುಡಿರೂಪೀ ಸಮಾಧಿಗಳಲ್ಲಿ ಕಂಡುಬರುವ ಕಬ್ಬಿಣ, ತಾಮ್ರ ಮತ್ತು ಚಿನ್ನದ ವಸ್ತುಗಳು ಲೋಹಶಾಸ್ತ್ರದ ಬೆಳವಣಿಗೆಗೆ ಸಾಕ್ಷಿಯಾಗಿದೆ. ಇದೇ ಕಾಲಕ್ಕೆ ಜವಳಿ ಉದ್ಯಮವೂ ಪ್ರವರ್ಧಮಾನಕ್ಕೆ ಬರುತ್ತಿತ್ತು. ಕ್ರಿ.ಶ.130ರ ಸುಮಾರಿಗೆ ಭಾರತಕ್ಕೆ ಬಂದ ಗ್ರೀಕ್ ಪ್ರವಾಸಿ ಟಾಲೆಮಿ, ಮೈಸೋಲಿಯಾ ಪ್ರದೇಶದ (ಕೃಷ್ಣ ಮುಖದ್ವಾರ)

ಪಿತೀಂಡ್ರ (ಭಟ್ಟಿಪ್ರೋಲು) ನಗರವು ಜವಳಿ ಉದ್ಯಮಕ್ಕೆ ಹೆಸರುವಾಸಿಯಾಗಿತ್ತು ಎಂದು ವಿವರಿಸಿದ್ದಾನೆ. ಕೃಷಿ, ಜವಳಿ, ಲೋಹದ ಬಳಕೆಯು ಪ್ರವರ್ಧಮಾನಕ್ಕೆ ಬರುತ್ತಿದ್ದಂತೆ ವ್ಯಾಪಾರ ಬೆಳವಣಿಗೆಗೆ ಅವಕಾಶವುಂಟಾಯಿತು. ಆಂಧ್ರಪ್ರದೇಶವು ಪ್ರಾಚೀನ ಕಾಲದಲ್ಲಿಯೇ ಭಾರತದ ಇತರ ಭಾಗಗಳಿಗೆ ಮತ್ತು ಆಗ್ನೇಯ ಏಷ್ಯಾಕ್ಕೆ ಅಕ್ಕಿಯನ್ನು ರಫ್ತು ಮಾಡುವ ಮೂಲಕ 'ಅನ್ನಪೂರ್ಣ' ಆಗಿತ್ತು. ಮಾತ್ರವಲ್ಲದೇ, ಹಾಲು, ದಿನಸಿ ಮತ್ತು ಬಟ್ಟೆಗಳನ್ನೂ ಸಹ ಸಹ ರಫ್ತುಮಾಡಲಾಗುತ್ತಿತ್ತು. ಪೂರ್ವದಲ್ಲಿ ಮೈಸೋಲಿಯಾ ಮತ್ತು ತೋಸಲಿ (ಕಳಿಂಗ) ಕೋಸಲ ರಾಜ್ಯಗಳ ಮೂಲಕ ಮತ್ತು ಪಶ್ಚಿಮದಲ್ಲಿ ಅಸ್ಸಾಕ, ಮುಲಾಕ ಮತ್ತು ವಿದರ್ಭಗಳ ಮೂಲಕ ಆಂಧ್ರಪ್ರದೇಶದಿಂದ ಮಗಧಕ್ಕೆ ರಸ್ತೆಗಳಿದ್ದವು. ಮೈಸೋಲಿಯಾ ಪ್ರದೇಶದಿಂದ ಕರಾವಳಿಯುದ್ದಕ್ಕೂ ಕಾಂಚಿಪುರಿಯವರೆಗೆ, ಕೃಷ್ಣತುಂಗಭದ್ರಾ ಕಣಿವೆಗಳ ಉದ್ದಕ್ಕೂ ವನವಾಸಕ್ಕೆ(ಮೈಸೂರು) ಮಾರ್ಗಗಳಿದ್ದವು. ಉತ್ತರ ರಾಜಪಥಕ್ಕಿಂತ (ವಾಯುವ್ಯದಲ್ಲಿರುವ ಮಗಧವನ್ನು ತಕ್ಷಶಿಲೆಗೆ ಸಂಪರ್ಕಿಸುವ ಮಾರ್ಗ) ಗಣಿ ಮತ್ತು ಕೈಗಾರಿಕಾ ಕೇಂದ್ರಗಳ ಮೂಲಕ ದಕ್ಷಿಣದ ವ್ಯಾಪಾರ ಮಾರ್ಗವು ಹೆಚ್ಚು ಲಾಭದಾಯಕವಾಗಿದೆ ಎಂದು ಕೌಟಿಲ್ಯ ಬರೆಯುತ್ತಾನೆ. ಮೈಸೋಲಿಯಾ ಪ್ರದೇಶವನ್ನು ಪಶ್ಚಿಮ ಕರಾವಳಿಯ ಬಂದರುಗಳಾದ ಬರುಕಚ್ಚಾದಿಂದ ಸಂಪರ್ಕಿಸುವ ಮಾರ್ಗವು ಅಸ್ಸಾಕ ಮತ್ತು ಮುಲಾಕಾ ಜನಪದಗಳ ಮೂಲಕ ವಿಸ್ತರಿಸಿದ ಸೂಚನೆಗಳಿವೆ. ಪ್ರತಿಷ್ಠಾನ ನಗರವು ಒಂದು ಜನಪ್ರಿಯ ಕೈಗಾರಿಕಾ ಮತ್ತು ವಾಣಿಜ್ಯ ಕೇಂದ್ರವಾಯಿತು, ಏಕೆಂದರೆ ಈ ಮಾರ್ಗದಲ್ಲಿ ಪ್ರಮುಖ ಸ್ಥಳವಾಗಿದ್ದರಿಂದ ಹಾಗೂ ಶಾತವಾಹನ ಸಾಮ್ರಾಜ್ಯದ ಮೊದಲ ಸ್ಥಾನವಾಯಿತು. ಪ್ರತಿಷ್ಠಾನಕ್ಕೆ ಸಮಕಾಲೀನವಾಗಿ ಆಂಧ್ರಪ್ರದೇಶದ ಹಲವು ನಗರಗಳು ಪ್ರವರ್ಧಮಾನಕ್ಕೆ ಬಂದಿವು. ಕ್ರಿಸ್ತಪೂರ್ವ 4ನೇ ಶತಮಾನದಲ್ಲಿ ಮೌರ್ಯನ ಆಸ್ಥಾನಕ್ಕೆ ಗ್ರೀಕ್ ರಾಯಭಾರಿಯಾಗಿದ್ದ ಮೆಗಾಸ್ತನೀಸ್ (ಕ್ರಿ.ಪೂ. 300) ಆಂಧ್ರರು 30 ಭದ್ರಕೋಟೆಗಳನ್ನು ಹೊಂದಿದ್ದರು ಎಂದು ಬರೆದಿದ್ದಾನೆ. ಧೂಳಿಕಟ್ಟಾ, ಕೋಟಿಲಿಂಗಾಲ, ಕೊಂಡಾಪುರ, ನೆಲಕೊಂಡಪಲ್ಲಿ ಧಾನ್ಯಕಟಕಂ, ಭಟ್ಟಿಪ್ರೋಲು, ಶಾಲಿಪುರಂ (ವಡ್ಡಮಾನು), ವಿಜಯಪುರಿ, ಚಂದಾವರಂ, ವೀರಾಪುರಂ, ಸಾತಾನಿ ಕೋಟ ಮುಂತಾದೆಡೆ ಕಂಡುಬರುವ ಮೌರ್ಯ ಶಾತವಾಹನ ಅವಶೇಷಗಳು ಮೆಗಾಸ್ತನೀಸ್‌ನ ದಾಖಲೀಕರಣವನ್ನು ಬಲಪಡಿಸುತ್ತವೆ. ಮತ್ತೊಬ್ಬ ಗ್ರೀಕ್ ಲೇಖಕನು ಆಂಧ್ರರಿಗೆ ಮೂವತ್ತು ರಾಜ್ಯಗಳಿದ್ದವು ಎಂದು ಬರೆದಿದ್ದಾನೆ. ಬಹುಶಃ, ಮೆಗಾಸ್ತನೀಸ್ ಉಲ್ಲೇಖಿಸಿದ 30 ಕೋಟೆಗಳ ಕೇಂದ್ರಗಳನ್ನು ರೂಪಿಸಿದ ಗಣರಾಜ್ಯಗಳು ಇವುಗಳಾಗಿವೆ. ಕೋಟಿಲಿಂಗಾಲ ಪ್ರದೇಶದಲ್ಲಿ 'ಶೈಬಕ' ಎಂಬ ಹೆಸರಿನ ಪ್ರಾಚೀನ ನಾಣ್ಯಗಳು ಮತ್ತು ವಡ್ಡಮಾನುವಿನಲ್ಲಿ 'ಸೋಮಕ' ಎಂಬ

ಶಾಸನವಿರುವ ನಾಣ್ಯಗಳು ದೊರೆತಿವೆ. ಭಟ್ಟಿಪ್ರೋಲುವಿನ ಶಾಸನಗಳ ಪ್ರಕಾರ, ಸವೇರನ ಮಗ ಕುಬೇರಕನು ಅಲ್ಲಿ ಆಳ್ವಿಕೆ ನಡೆಸುತ್ತಿದ್ದನು. ಈ ಗಣರಾಜ್ಯಗಳಲ್ಲಿ ಶ್ರೀಮಂತರಾದ ಶೆಟ್ಟಿ, ಗಹಪತಿ ಮತ್ತು ಕಾರ್ಮಿಕ/ಕಾಯಕ ಸಮುದಾಯಗಳು ಪ್ರಬಲವಾಗಿದ್ದವು. ಅವರ ಪ್ರತಿನಿಧಿಗಳೊಂದಿಗೆ ರಚಿಸಲಾದ 'ನಿಗಮ' ಸಭೆಗಳ ಸಹಯೋಗದೊಂದಿಗೆ ಅಂದಿನ ಗಣರಾಜ್ಯಗಳು ಆಳ್ವಿಕೆ ನಡೆಸುತ್ತಿದ್ದುದನ್ನು ಭಟ್ಟಿಪ್ರೋಲು ಶಾಸನಗಳು ತಿಳಿಸುತ್ತವೆ. ಆಂಧ್ರಪ್ರದೇಶದಲ್ಲಿ ಹಾಗೂ ಉತ್ತರದಲ್ಲಿ ಈ ಸಮುದಾಯಗಳು ಬೌದ್ಧಧರ್ಮವನ್ನು ಸ್ವೀಕರಿಸಿ ಪೋಷಿಸಿದರು. ಶಾತವಾಹನರು ಈ ಎಲ್ಲಾ ರಾಜ್ಯಗಳನ್ನು ಒಂದುಗೂಡಿಸಿ ಮಹಾಸಾಮ್ರಾಜ್ಯವನ್ನು ಸ್ಥಾಪಿಸಿದರು.

**ಆಂಧ್ರದಲ್ಲಿ ಬೌದ್ಧಧರ್ಮದ ಪ್ರವೇಶ:**

ಮೇಲೆ ವಿವರಿಸಿದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸಂದರ್ಭದಲ್ಲಿ ಬುದ್ಧನ ಕಾಲದಲ್ಲೇ ಬೌದ್ಧಧರ್ಮವು ಆಂಧ್ರಪ್ರದೇಶವನ್ನು ಪ್ರವೇಶಿಸಿದೆ ಎಂದು ಬೌದ್ಧವಾಙ್ಮಯ ಪುರಾವೆಗಳು ಸೂಚಿಸುತ್ತವೆ. ಮೇಲೆ ಹೇಳಿದ ಬ್ರಾಹ್ಮಣ ವಿದ್ವಾಂಸನಾದ ಬಾವರಿಯನ್ನು 'ಸುತ್ತನಿಪಾತ' ಎಂದು ಉಲ್ಲೇಖಿಸಿದೆ. ತಮ್ಮ ವಾಕ್ಚಾತುರ್ಯ ಮತ್ತು ಸೌಶೀಲ್ಯತೆಯಿಂದ ಬಾವರಿಯವರು ದೂರದ ದೇಶಗಳ ಶಿಷ್ಯರನ್ನು ಮಾತ್ರವಲ್ಲದೆ ರಾಜಮನೆತನವನ್ನೂ ಆಕರ್ಷಿಸಿದರು! ಮಗಧದಲ್ಲಿ ಗೌತಮ ಬುದ್ಧನ ಜನಪ್ರಿಯತೆಯನ್ನು ಕೇಳಿ, ಅವನ ಯೋಗ್ಯತೆಯನ್ನು ಪರೀಕ್ಷಿಸಲು ಬಾವರಿ ತನ್ನ ಶಿಷ್ಯರನ್ನು ಮಗಧಕ್ಕೆ ಕಳುಹಿಸಿದರು. ಆ ಶಿಷ್ಯರು ಅರಮನೆಯಲ್ಲಿ ಬುದ್ಧನ ಬೋಧನೆಗಳನ್ನು ಕೇಳಿ ಪ್ರಭಾವಿತರಾದರು ಮತ್ತು ಅವರ ಶಿಷ್ಯರಾದರು. ಅವರಲ್ಲಿ ಬವರಿಯ ಸೋದರಳಿಯನಾದ ಮಾತ್ರ ಬಾವ-ರಿಯ ಆಶ್ರಮವನ್ನು ಸೇರಿ ಬುದ್ಧಬೋಧನೆಗಳ ಮಹತ್ವವನ್ನು ವಿವ-ರಿಸುವ ಮೂಲಕ ಬಾವರಿಯು ಬೌದ್ಧಧರ್ಮದ 'ಅನಾಗಮಿ' ಹಂತವನ್ನು ತಲುಪಿದನೆಂದು 'ಸುತ್ತನಿಪಾತ'ವು ವಿವರಿಸುತ್ತದೆ. ಧಮ್ಮಪಾಲನು 'ವಿಮಾನವತ್ಥು' ಕುರಿತು ಬರೆದ ಭಾಷ್ಯವಾದ 'ಪರಮಾರ್ಥದೀಪನಿ'ಯು ಬುದ್ಧನ ಅಗ್ರಗಣ್ಯ ಶಿಷ್ಯರಲ್ಲಿ ಒಬ್ಬನಾದ ಮಹಾಕಾತ್ಸಾಯನನು ಅಸ್ಸಕ ಪ್ರಭುವಿಗೆ ಬೌದ್ಧಧರ್ಮವನ್ನು ಬೋಧಿಸಿದನೆಂದು ವಿವರಿಸುತ್ತದೆ. 'ವಿನಯಪಿಟಕ'ದಲ್ಲಿ ಮೊದಲ ವಿಭಾಗವಾದ 'ಮಹಾವಗ್ಗ'ವು ಶ್ರಾವಸ್ತಿಯಲ್ಲಿ 'ಅಂಧಕವನ'ವನ್ನು, ಮತ್ತು ರಾಜಗೃಹದಲ್ಲಿ ·ಅಂಧಕ ವಿಂದ'ವನ್ನು ಉಲ್ಲೇಖಿಸುತ್ತದೆ. ಬೌದ್ಧ ವಾಙ್ಮಯವು ಆಂಧ್ರದ ಬೌದ್ಧಸನ್ಯಾಸಿಗಳನ್ನು 'ಅಂಧಕ'ರೆಂದು ಪರಿಗಣಿಸಿತು. ಆದ್ದರಿಂದ, ಅಂಧಕವನ ಮತ್ತು ಅಂಧಕ

ವಿಂದಗಳು ಶ್ರಾವಸಿ, ರಾಜಗೃಹಗಳಲ್ಲಿ ಆಂಧ್ರಬೌದ್ಧರಿಗೆ ವಿಶೇಷ ವಸತಿಗೃಹಗಳೆಂದು ಪರಿಗಣಿಸಬಹುದಾಗಿದೆ.

ಮೂರನೆಯ ಬೌದ್ಧ ಸಂಗೀತಿಯಲ್ಲಿ ವಾದಪ್ರತಿವಾದಗಳು 'ಕಥಾವತ್ಥು ಪ್ರಕರಣ'ವಾಗಿ ಸಂಕಲಿಸಲಾಗಿದೆ. ಆ ಗ್ರಂಥವನ್ನು ಅನುಸರಿಸಿ, ಅಂಧಕ ಶಾಖೆಗಳಾದ ಚೈತ್ಯಕ, ಶೈಲವೈತುಲ್ಯವಾದಗಳು ಮೂರನೇ ಸಂಗೀತಿ ಚರ್ಚೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದಂತೆ ತೋರುತ್ತದೆ. ಬೌದ್ಧ ದರ್ಶನದಲ್ಲಿ ದೀರ್ಘಕಾಲ ಪರಿಚಯವಾಗಲೀ, ಅದರ ಸಂಪೂರ್ಣ ಪಾಂಡಿತ್ಯವಾಗಲೀ ಇಲ್ಲದೆ ಸೂಕ್ಷ್ಮವಾದ ತಾತ್ವಿಕ ಚರ್ಚೆಗಳಲ್ಲಿ ಅಂಧಕರಿಗೆ ಅಂತಹ ಪ್ರಮುಖ ಪಾತ್ರವನ್ನು ವಹಿಸಲು ಸಾಧ್ಯವಾಗುತ್ತಿರಲಿಲ್ಲ. ಇದು ದೇಶ್ಯವೊಂದರಲ್ಲಿ ಬೌದ್ಧಧರ್ಮವು ವಿಶೇಷ ಜನಪ್ರಿಯತೆಯನ್ನು ಗಳಿಸಿರುವುದನ್ನು ಸೂಚಿಸುತ್ತದೆ. ಮಹಾದೇವ ಭಿಕ್ಷುವು ಅಶೋಕನು ಮಹಿಷಮಂಡಲಕ್ಕೆ ಕಳುಹಿಸಿದ ಧರ್ಮಪ್ರಚಾರಕನೇ ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ.

ಪುರಾತತ್ತ್ವಶಾಸ್ತ್ರದ ಪುರಾವೆಗಳು ಅಶೋಕನಿಗಿಂತ ಮೊದಲು ಆಂಧ್ರಪ್ರದೇಶದಲ್ಲಿ ಬೌದ್ಧಧರ್ಮವು ಜನಪ್ರಿಯವಾಗಿತ್ತು ಎಂಬುದಕ್ಕೆ ಮೇಲಿನ ವಾಸ್ತವಿಕ ಪುರಾವೆಗಳನ್ನು ಬೆಂಬಲಿಸುತ್ತವೆ. ಅಶೋಕನ 13ನೇ ಶಾಸನದಿಂದಲೂ ಆಂಧ್ರದವರು ಧರ್ಮವನ್ನು ಅನುಸರಿಸುತ್ತಿದ್ದರು ಎಂದು ಹೇಳುತ್ತದೆಯಲ್ಲವೇ! ಇತ್ತೀಚೆಗಷ್ಟೇ, ಇಂದಿನ ಅಮರಾವತಿಯಲ್ಲಿ ಅಶೋಕನ ಕಲ್ಲಿನ ಸ್ತಂಭವೊಂದು ಪತ್ತೆಯಾಗಿದೆ. ಆ ಶಾಸನವು ಅಶೋಕನ ಗಿರ್ನಾರ್ ಶಾಸನವನ್ನು ಹೋಲುತ್ತದೆ. ಪುಣ್ಯಕ್ಷೇತ್ರಗಳಲ್ಲಿ ಸ್ತಂಭ ಪ್ರತಿಷ್ಠಾಪಿಸುವುದು ಪ್ರಾಚೀನ ಭಾರತೀಯ ಸಂಪ್ರದಾಯವಾಗಿದೆ. ಆ ಸಂಪ್ರದಾಯದ ಪ್ರಕಾರ, ಅಶೋಕನು ಬುದ್ಧನ ಜೀವನಕ್ಕೆ ಸಂಬಂಧಿಸಿದ ಸ್ಥಳಗಳಲ್ಲಿ ಮತ್ತು ಈಗಾಗಲೇ ಬೌದ್ಧ ತಾಣಗಳೆಂದು ಕರೆಯಲ್ಪಡುವ ಸ್ಥಳಗಳಲ್ಲಿ ಸ್ತಂಭಗಳನ್ನು ಸ್ಥಾಪಿಸಿದನು ಎಂದು ಇತಿಹಾಸಕಾರರು ಭಾವಿಸುತ್ತಾರೆ. ಹಾಗಾಗಿ ಅಶೋಕನ ಕಾಲದಲ್ಲಿ 'ಧಮ್ಮಕಡ'ವು ಬೌದ್ಧಕ್ಷೇತ್ರವಾಗಿ ಪ್ರವರ್ಧಮಾನಕ್ಕೆ ಬಂದಿತೆಂದು ಹೇಳಬಹುದು. ಜಾತಕ ಕಥೆಗಳಲ್ಲಿನ ತೇರಿವಾಹ ನದಿಯನ್ನು (ತೈಲವಾಹ: ಕಪ್ಪುಎಣ್ಣೆಯಂತೆ ಹರಿಯುವ ನದಿ) ಕೃಷ್ಣಾ ನದಿ ಎಂದು ಚರಿತ್ರೆಕಾರರು (ರಾಮಾಚೌಧರಿ) ಗುರುತಿಸುತ್ತಾರೆ. ಪಲ್ಲವ ಶಿವಸ್ಕಂಧವರ್ಮನಿಗೆ ಸಂಬಂಧಪಟ್ಟ ತಾಮ್ರಶಾಸನದಲ್ಲಿ ಧನಕಟಕವನ್ನು ಆಂಧ್ರ ಮಾರ್ಗದ ರಾಜಧಾನಿ ಎಂದು ಹೇಳಲಾಗಿದೆ. ಆಂಧ್ರ ಪಥದ ರಾಜಧಾನಿಯಾಗಿರುವುದರಿಂದ ಧನಕಟಕವನ್ನು ಆಂಧ್ರ ನಗರಿ ಎಂದೂ ಕರೆಯುತ್ತಾರೆ. ಆದಾಗ್ಯೂ, ಜಾತಕ ಕಥೆಗಳಲ್ಲಿ, ಆಂಧ್ರನಗರಿ

ಧಾನ್ಯಕಟಕಂ ಎಂದೇ ಗಮನಿಸುವುದು ಸಮಂಜಸವಾಗಿದೆ. ಅಲ್ಲದೆ, ಇದು ಬೌದ್ಧ ಕ್ಷೇತ್ರವೆಂದು ಪ್ರಸಿದ್ಧವಾದ ಕಾರಣ ಧಾನ್ಯಕಟಕಕ್ಕೆ–ಆಂಧ್ರ ನಗರಕ್ಕೆ–ಜಾತಕ ಕಥೆಗಳಲ್ಲಿ ಪ್ರಮುಖ ಸ್ಥಾನವು ದೊರೆತಿದೆ ಎಂದು ಹೇಳಬಹುದಾಗಿದೆ.

ಇತ್ತೀಚಿನ ಧಾನ್ಯಕಟಕ ಸ್ತೂಪ ಸ್ಥಳದಲ್ಲಿ ಉತ್ಖನನಗಳು ಮೌರ್ಯ (ಅಶೋಕ) ಯುಗಕ್ಕೂ ಹಿಂದಿನ ಕನಿಷ್ಠ ಪ್ರಮಾಣದಲ್ಲಿಯಾದರೂ ಸ್ತೂಪದ ಪುರಾವೆಗಳಿರುವದನ್ನು ಬಹಿರಂಗಪಡಿಸಿವೆ. ಅಶೋಕ ಸ್ತೂಪವನ್ನು ದೊಡ್ಡ ಗಾತ್ರಕ್ಕೆ ಪುನರ್ನಿರ್ಮಿಸಿ ಶಿಲಾ (ಗ್ರಾನೈಟ್) ಗೋಡೆಯನ್ನು ನಿರ್ಮಿಸಿದ ಎಂಬುದಕ್ಕೂ ಪುರಾವೆಗಳಿವೆ. ಈ ಸ್ತೂಪದ ಪುನರ್ನಿರ್ಮಾಣದ ಅವಧಿಯಲ್ಲಿ ಬಳಕೆಯಾಗಿರುವ ಮೌರ್ಯರ ಕಾಲದ ಉತ್ತರ ಕಪ್ಪು ಪಾಲಿಶ್ ಮಾಡಿದ ಸಾಮಾನುಗಳ (Northern Black Polished Ware) ತುಣುಕುಗಳು ವಿಶೇಷವಾಗಿ ಕಂಡುಬಂದಿವೆಯಲ್ಲದೆ, ಮೌರ್ಯ ಲಿಪಿಯಲ್ಲಿನ ಶಾಸನಗಳು ಸ್ಥಂಭಗಳ ಮೇಲೆ ಕಂಡುಬಂದಿವೆ. 'ಮಂಜುಶ್ರೀ ಮೂಲಕಲ್ಪ' ಎಂಬ ವಾಕ್ಯವನ್ನು 'ಶ್ರೀ ಧಾನ್ಯ ಕಟಕ ಚೈತ್ಯ ಜಿನಧಾತುರ್ಧ ರೇಭುವಿ' ಎಂಬ ವಾಕ್ಯವನ್ನು ಅನುಸರಿಸಿ ರಾಮಗ್ರಾಮದಿಂದ ಸಂಗ್ರಹಿಸಿದ ಬುದ್ಧನ ಅವಶೇಷಗಳನ್ನು ಇಟ್ಟು ಅಶೋಕನು ಧಾನ್ಯಕಟಕ ಚೈತ್ಯವನ್ನು ಪುನಃಸ್ಥಾಪಿಸುತ್ತಾನೆ. ಸಿಂಹಳೀಯ ಗ್ರಂಥವಾದ 'ದಳದವಂಶ'ದ ಪ್ರಕಾರ, ಅಶೋಕನು ಬುದ್ಧನ ದಂತದ ಮೇಲೆ ವಜ್ರದ ದಿಬ್ಬದಲ್ಲಿ ಸ್ತೂಪವನ್ನು ನಿರ್ಮಿಸಿದನು. ಫರ್ಗುಸನ್‌ರಂತಹ ವಿದ್ವಾಂಸರು ವಜ್ರಾಲ ದಿಬ್ಬವನ್ನು ಧಾನ್ಯಕಟಕದ ಪ್ರಾಂತ್ಯವೆಂದು ಗುರುತಿಸಿದ್ದಾರೆ.

ಆಂಧ್ರಪ್ರದೇಶದ ಇತರ ಕೆಲವು ಬೌದ್ಧತಾಣಗಳೊಂದಿಗೆ ಅಶೋಕ ಸಂಬಂಧ ಹೊಂದಿರುವ ಸೂಚನೆಗಳಿವೆ. ಎರ್ರಗುಡಿ (ಅನಂತಪುರ), ಅರಸರ ಮಂದಗಿರ್ (ಕರ್ನೂಲು ಜಿಲ್ಲೆ) ಬಗ್ಗೆ ಹೇಳಬೇಕಾಗಿಲ್ಲ. ಭಟ್ಟಿಪ್ರೋಲು ಸ್ತೂಪದಲ್ಲಿ ಕಂಡುಬರುವ ಶಾಸನಗಳು ಮೌರ್ಯ ಲಿಪಿಯಲ್ಲಿವೆ ಮತ್ತು ಅರಾಮಿಕ್ ಲಿಪಿಯಿಂದ ಪ್ರಭಾವಿತವಾಗಿರಬಹುದು ಎಂದು ಲಿಪಿಶಾಸ್ತ್ರಜ್ಞರು ಭಾವಿಸುತ್ತಾರೆ. ಧಾತುಗರ್ಭವೆನಿಸಿದ ಸ್ಫಟಿಕ ಕರಂಡಕಗಳನ್ನು ಸುಭದ್ರಗೊಳಿಸಿದ ಶಿಲಾಪಟ್ಟಿಗೆಗಳ ಮೇಲೆ ಮೌರ್ಯಯುಗಕ್ಕೆ ಸಹಜವೆನಿಸಿದ್ದ ಹೊಳಪು (Polish) ಕಂಡುಬರುತ್ತದೆ. ಆದುದರಿಂದ ಅಶೋಕನು ಬುದ್ಧಧಾತುವಿನೊಂದಿಗೆ ಶಿಲಾಪಟ್ಟಿಗೆಗಳನ್ನು ಸಹ ಭಟ್ಟಿಪ್ರೋಲು ಬೌದ್ಧಸನ್ಯಾಸಿಗಳಿಗೆ ಉಡುಗೊರೆಯಾಗಿ ನೀಡಿರಬಹುದೆಂದೂ, ಆ ಶಿಲಾಪೆಟ್ಟಿಗೆಗಳ ಮೇಲಿರುವ ಶಾಸನಗಳನ್ನು ಅಶೋಕನೇ ಕೆತ್ತಿಸಿದ್ದಾನೆ ಎಂದು ಭಾವಿಸಬಹುದು.

ಕ್ರಿ.ಶ.ಹತ್ತನೇ ಶತಮಾನದಲ್ಲಿ ಭಾರತಕ್ಕೆ ಬಂದಿದ್ದ ಚೀನೀ ಪ್ರವಾಸಿ ಯುವಾನ್

ಚಾಂಗ್ ತಾನು ಕಳಿಂಗ ರಾಜಧಾನಿ ಕಳಿಂಗದ ಸಮೀಪದಲ್ಲಿರುವ ಒಂದು ಅಶೋಕ ಸ್ತೂಪ ಮತ್ತು ಚು–ಳಿ–ಯಾ ಸಾಮ್ರಾಜ್ಯದಲ್ಲಿ ಮತ್ತೊಂದು ಅಶೋಕ ಸ್ತೂಪಕ್ಕೆ ಭೇಟಿ ನೀಡಿದ್ದೆನೆಂದು ಉಲ್ಲೇಖಿಸಿದ್ದಾನೆ. ಮೊದಲ ಸ್ತೂಪವು ನೂರು ಅಡಿ ಎತ್ತರದಲ್ಲಿದೆ ಎಂದು ವಿವರಿಸಿದ್ದಾನೆ. ಈ ವಿವರಣೆಯು ಶ್ರೀಕಾಕುಳಂ ಜಿಲ್ಲೆಯ ಶಾಲಿಹುಂಡಂ ಸ್ತೂಪಕ್ಕೆ ಅನ್ವಯಿಸುತ್ತದೆ. ಈ ತಾಣದಲ್ಲಿ 'ಧರ್ಮರಾಜ ಅಶೋಕ' ಎಂಬ ಹೆಸರುಳ್ಳ ಶಾಸನ ದೊರೆತಿದೆ. ಆದರೆ ಈ ಶಾಸನವು ಕ್ರಿ.ಶ. ಎರಡನೇ ಶತಮಾನದ ಲಿಪಿಯಲ್ಲಿದೆ. ಆದಾಗ್ಯೂ, ಕ್ರಿ.ಶ. ಎರಡನೇ ಶತಮಾನದಲ್ಲಿ ಶಾಲಿಹುಂಡದಲ್ಲಿ ಅಶೋಕ ಸ್ತೂಪವನ್ನು ಪುನರ್ನಿರ್ಮಿಸಿದ ಭಕ್ತರು ಮೇಲಿನ ಶಾಸನವನ್ನು ಮೌರ್ಯ ಚಕ್ರವರ್ತಿಯ ಸ್ಮಾರಕವಾಗಿ ಭಕ್ತಿಯಿಂದ ಬರೆದಿರಬಹುದೆಂದು ಇತಿಹಾಸಕಾರರು ಭಾವಿಸಿದ್ದಾರೆ.

ಯುವಾನ್ ಚಾಂಗ್ ಉಲ್ಲೇಖಿಸಿದ ಚು–ಳಿ–ಯಾ ಚೋಳ ರಾಜ್ಯವು ಎಂಬುದರಲ್ಲಿ ಸಂದೇಹವಿಲ್ಲ. ಕ್ರಿ.ಶ ಏಳನೇ ಶತಮಾನದಲ್ಲಿ ಕಡಪ ಮತ್ತು ಕರ್ನೂಲ್ ಅನ್ನು ರೇನಾಟಿ ಚೋಡರು ಆಳಿದರು. ಆದ್ದರಿಂದ ಇದನ್ನು ಚೋಳ ವಲಯ ಎಂದು ಜನಪ್ರಿಯವಾಗಿ ಕರೆಯಲಾಗುತ್ತದೆ. ಇತ್ತೀಚೆಗೆ, ಕರ್ನೂಲ್ ಜಿಲ್ಲೆಯ ಚಂದಾವರಂನಲ್ಲಿ ಬೃಹತ್ ಸ್ತೂಪವನ್ನು ಕಂಡುಬಂದಿದೆ. ಅಲ್ಲಿನ ಶಿಲ್ಪಗಳು ಕ್ರಿ.ಪೂ. 100ರ ಪ್ರದೇಶವೊಂದಕ್ಕೆ ಸಂಬಂಧಿಸಿದ ಅಮರಾವತಿ ಶಿಲ್ಪಗಳನ್ನು ಹೋಲುತ್ತವೆ. ಆದ್ದರಿಂದ ಚಂದಾವರ ಸ್ತೂಪವೇ ಯುವಾನ್ ಚಾಂಗ್ ಚು–ಲಿ–ಯಾದಲ್ಲಿ ಕಂಡ ಅಶೋಕ ಸ್ತೂಪವಾಗಿರಬಹುದು. ಅಥವಾ ಕಡಪ ಜಿಲ್ಲೆಯ ನಂದಾವರಂ ಬಳಿಯಲ್ಲಿ ಕಂಡುಬಂದಿರುವ ಆದಾಪುರ ಸ್ತೂಪವಾಗಿದೆ. ಆದಾಪುರದಲ್ಲಿ ಶಾತವಾಹನರ ಕುದುರೆ ಚಿಹ್ನೆಯುಳ್ಳ ನಾಣ್ಯಗಳು ದೊರೆತಿವೆ.

ಬೌದ್ಧ ಧರ್ಮದ ಪೋಷಕರು

ಆಂಧ್ರಪ್ರದೇಶದಲ್ಲಿ ಶಾತವಾಹನ ಮತ್ತು ಇಕ್ಷ್ವಾಕು ರಾಜವಂಶಗಳು ಬೌದ್ಧಧರ್ಮವನ್ನು ಪೋಷಿಸಿದರೆಂದೂ ಆ ರಾಜರು ಬ್ರಾಹ್ಮಣರಾಗಿದ್ದರೆಂದೂ ಮತ್ತವರ ರಾಣಿಯರೂ ಸಹ ಬೌದ್ಧಧರ್ಮವನ್ನು ಆದರಿಸಿದರು ಎಂಬುದು ಸಾಮಾನ್ಯ ಅಭಿಪ್ರಾಯ. ಈ ಅಭಿಪ್ರಾಯವು ನಿಜವೆಂದು ತೋರುತ್ತಿಲ್ಲ. ವಾಸ್ತವವಾಗಿ, ಶಾತವಾಹನ–ಇಕ್ಷ್ವಾಕು ಯುಗದಲ್ಲಿ, ಬ್ರಾಹ್ಮಣತ್ವವನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಗಳನ್ನು ಮಾಡಲಾಯಿತು. ಶಾತವಾಹನ ರಾಜವಂಶದ ಎರಡನೇ ರಾಜ ಕನ್ಹಾ (ಕೃಷ್ಣ) ಶಾತಕರ್ಣಿಯ ಹೆಸರು ಭಾಗವತ ಧಾರ್ಮಿಕ ಪ್ರಭಾವವನ್ನು ಸೂಚಿಸುತ್ತದೆ. ಕನ್ಹಾ ನಂತರದ ಸಿಂಹಾಸನವು ವಾಸುದೇವ (ಭಾಗವತ ಮತಾಧಿದೇವತೆಗಳು) ಆರಾಧನೆಯೊಂದಿಗೆ ಪ್ರಾರಂಭವಾಗುತ್ತದೆ. ಈ ಶಾಸನದ

ಪ್ರಕಾರ, ಶಾತಕರ್ಣಿ ಅಶ್ವಮೇಧ, ರಾಜಸೂಯ, ಅತಿರಾತ್ರ, ತ್ರಯೋದಶ ರಾತ್ರಿ, ಆಪ್ತೋರ್ಯಾಮ, ಅನಾರಂಭ ನಿಯಾದಿಗಳ ಮೂಲಕ ಅನೇಕ ವೈದಿಕರನ್ನು ಅರ್ಚಿಸಿ (ಬ್ರಾಹ್ಮಣರಿಗೆ) ಭೂರಿ ದಕ್ಷಿಣೆಗಳನ್ನು ನೀಡಿದನು. ಗೌತಮಿಯ ಮಗನಾದ ಮೂರನೇ ಶಾತಕರ್ಣಿಯು ಆಗಮ ನಿಲಯನು, ದ್ವಿಜವರ ಕುಟುಂಬದ ವಿವರ್ಧನನು, ರೂಪಾಂತರೀ ಚಾತುರ್ವರ್ಣ ಸಂರಕ್ಷಕನಾಗಿದ್ದನು. ಆಗಮಗಳು, ದ್ವಿಜಾಧಿಕ್ಯತೆ, ವರ್ಣವ್ಯವಸ್ಥೆಗಳು ಬ್ರಾಹ್ಮಣ ಧರ್ಮದ ಆಧಾರಸ್ತಂಭಗಳಲ್ಲವೇ! ಆದ್ದರಿಂದ ಅವುಗಳನ್ನು ಶುದ್ಧೀಕರಿಸಿ ಗೌತಮಿಪುತ್ರನು 'ಏಕ ಬ್ರಾಹ್ಮಣ' ಎಂಬ ಬಿರುದನ್ನು ಧರಿಸಿದನು. ಆತನ ನಂತರ ಶಾತವಾಹನರಲ್ಲಿ ಯಜ್ಞಶ್ರೀ ಶಾತಕರ್ಣಿ ಪ್ರಸಿದ್ಧನಾದವನು..

ಆದಾಗ್ಯೂ, ಏಕಬ್ರಾಹ್ಮಣನಾದ ಗೌತಮಿಪುತ್ರನು ಮತ್ತು ಅವನ ಮಗ ವಸಿಷ್ಠಿಪುತ್ರ ಪುಲೋಮಾವಿ ಬೌದ್ಧರಿಗೆ ದಾನ ಮಾಡಿದ ಯಾವುದೇ ಶಾಸನದ ಪುರಾವೆಗಳಿಲ್ಲದಿಲ್ಲ. ಆದರೆ ಇವರಿಬ್ಬರೂ ಅತ್ಯಂತ ಧರ್ಮನಿಷ್ಠೆ ಮತ್ತು ಉದಾ–ರಿಚಿತ್ತರಾದ ಗೌತಮಿ ಬಾಲಶ್ರೀ ಅವರ ವ್ಯಕ್ತಿತ್ವದ ಪ್ರಭಾವದಿಂದ ಬೌದ್ಧರ ಒಲವು ತೋರುತ್ತಿದ್ದು ಕಂಡುಬರುತ್ತದೆ. ಬೌದ್ಧರಿಗೆ ನೀಡಿದ ಎರಡು ದೇಣಿಗೆಗಳಲ್ಲಿ ಒಂದನ್ನು ಗೌತಮಿಯ ಮಗ ತನ್ನ ತಾಯಿಯ ಮೂಲಕವೇ ಪೂರೈಸಿದನು. ಮತ್ತೊಂದೆಡೆ, ಪುಲೋಮಾವಿಯು ತನ್ನ ಅಜ್ಜಿಯ ·ಪ್ರೀತಿಪಾತ್ರ'ವಾಗಿ ಬೌದ್ಧರಿಗೆ ದಾನ ಮಾಡಿರುವುದಾಗಿ ಸ್ಪಷ್ಟಪಡಿಸಿದ್ದಾನೆ. ಇದಲ್ಲದೆ, ಬೌದ್ಧಧರ್ಮದ ಕಡೆಗೆ ಅವರ ಔದಾರ್ಯಕ್ಕೆ ಯಾವುದೇ ಆರ್ಥಿಕ ಅಥವಾ ರಾಜಕೀಯ ಕಾರಣಗಳಿಲ್ಲದಿಲ್ಲ. ಈ ಯುಗದಲ್ಲಿ ಶ್ರೇಷ್ಠಿ, ಕಾಯಕ/ಕರ್ಮಕಾರ ಮತ್ತು ಗಹಪತಿ ಸಮುದಾಯಗಳು ಶ್ರೀಮಂತರಾಗಿದ್ದರು ಮತ್ತು ಸರ್ಕಾರದ ಆದಾಯದ ಮೂಲವಾಗಿದ್ದವು. ಈ ಪಂಗಡಗಳು ಬೌದ್ಧಧರ್ಮಾಭಿಮಾನಿಗಳು. ಆದ್ದರಿಂದ ಬೌದ್ಧಧರ್ಮದ ಬಗ್ಗೆ ಅನಾದರ ತೋರುವುದು ರಾಜನೀತಿಗೆ ವಿರುದ್ಧವಾದುದೆಂದು ಅವರು ಗ್ರಹಿಸುತ್ತಾರೆ. ಇನ್ನೊಂದು ವೈಶಿಷ್ಟ್ಯವೆಂದರೆ ಶಾತಕರ್ಣಿ, ಪುಲೋಮಾವಿಗಳು ನಾಸಿಕ್ ಪ್ರದೇಶದಲ್ಲಿನ ಬೌದ್ಧರಿಗೆ ಮಾತ್ರ ದಾನ ಕಾರ್ಯಗಳನ್ನು ಮಾಡುತ್ತಾರೆ. ಈ ಪ್ರದೇಶವನ್ನು ಗೌತಮಿಯ ಮಗನು ಕ್ಷಹರಾಟರಿಂದ ವಶಪಡಿಸಿಕೊಂಡನು. ಕ್ಷಹರಾಟರ ಪ್ರದೇಶದಲ್ಲಿದ್ದ ಬ್ರಾಹ್ಮಣ ಶ್ರಮಣರಿಗೆ ಬಹಳ ಉದಾರಿಯಾಗಿದ್ದನೆಂದು ಅಲ್ಲಿನ ವೃಷಭದತ್ತನ ಶಾಸನಗಳು ಸ್ಪಷ್ಟಪಡಿಸುತ್ತವೆ. ಹಾಗಾಗಿ ಹೊಸದಾಗಿ ವಶಪಡಿಸಿಕೊಂಡ ಆ ಪ್ರದೇಶಗಳಲ್ಲಿ ಶಾತವಾಹನ ಶಕ್ತಿಯನ್ನು ಬಲಪಡಿಸುವ ಸಲುವಾಗಿ ಅಲ್ಲಿ ಪ್ರಬಲವಾಗಿದ್ದ ಧಾರ್ಮಿಕ ಸಂಸ್ಥೆಗಳಿಗೆ ಉದಾರವಾಗಿರುವುದು

ಗೌತಮಿಪುತ್ರನಿಗೆ ರಾಜಕೀಯವಾಗಿ ಅನಿವಾರ್ಯವಾಗಿತ್ತು. ಪುಲೋಮಾವಿ ಅವಧಿಯಲ್ಲಿ ಕರ್ತಮಕ ರಾಜವಂಶವು ಪ್ರವರ್ಧಮಾನಕ್ಕೆ ಬಂದಿದ್ದರಿಂದ ಆತನು ಧಾರ್ಮಿಕ ಸಂಸ್ಥೆಗಳಿಗೆ ಆತನ ಪಿತೃವಿನ ವಿಧಾನವನ್ನು ಮುಂದುವರಿಸಲು ಒತ್ತಡವುಂಟಾಯಿತು.

ಶಾತವಾಹನ ರಾಣಿಯರ ಬೌದ್ಧಧರ್ಮಾಭಿಮಾನವೂ ಸಹ ಬಹಳ ಸೀಮಿತವಾದುದೆಂದು ಹೇಳಬಹುದಾಗಿದೆ. ಶಾತವಾಹನ ರಾಣಿಯರಲ್ಲಿ ಅದರಲ್ಲೂ ನಾಗಾನಿಕಾ ಮತ್ತು ಬಾಲಶ್ರೀ – ನಮಗೆ ಗೊತ್ತಿರುವವರು ಇಬ್ಬರೇ. ಇವರಲ್ಲಿ ನಾಗಾನಿಕ ವೈದಿಕ ಧರ್ಮಿಷ್ಠೆ. ಆಕೆಯ ಪತಿಯು ಮಾಡಿದ ವಿಸ್ತಾರವಾದ ಕೃತುಕಾಂಡದಲ್ಲಿ ಪಾಲುದಾರಳಾಗಿದ್ದನ್ನು ನಾನಾಘಟ್ಟದ ಶಾಸನದಲ್ಲಿ 'ಯಜ್ಞಹೂತ್ರ ಧೂಪನಸುಗಂಧ ಯಾ' ಎಂದು ಹೆಮ್ಮೆಯಿಂದ ವರ್ಣಿಸಲಾಗಿದೆ. ಬಾಲಶ್ರೀ ಕೂಡ ಬೌದ್ಧಧರ್ಮ ಸ್ವೀಕರಿಸಿರುವ ಸೂಚನೆ ಇಲ್ಲ. ಯಮ ನಿಯಮಗಳೊಂದಿಗೆ ಧರ್ಮನಿಷ್ಠರಾಗಿ ಬದುಕಿದ ಬಾಲಶ್ರೀ ತಾನು 'ರಾಜರ್ಷಿಪತ್ನಿ' ಎಂದು ಕರೆದುಕೊಂಡಳೇ ಹೊರತು ಉಪಾಸಕಿ ಎಂದು ಹೇಳಿಕೊಳ್ಳಲಿಲ್ಲ. ಮಗನ ವೈದಿಕ ಭಕ್ತಿಗೆ ಮೆಚ್ಚಿ ರಾಮಕೇಶವನನ್ನು ಕೈಲಾಸ ಪರ್ವತಕ್ಕೆ ಹೋಲಿಸಿ ಹೆಮ್ಮೆಪಟ್ಟಳು. ಆದಾಗ್ಯೂ, ಆಕೆಯು ಬೌದ್ಧರ ಕು–ರಿತು ತಮ್ಮ ಔದಾರ್ಯವನ್ನು ತೋರಿಸಿದಳು. ಆಕೆಯ ಪವಿತ್ರ ಪ್ರಭಾವವು ಅವಳ ಮಕ್ಕಳು–ಮೊಮ್ಮಕ್ಕಳಿಗೆ ಪಸರಿಸಿತು.

ಇಕ್ಷ್ವಾಕು ಯುಗ (ಕ್ರಿ.ಶ.225–300) ಆಂಧ್ರದ ಬೌದ್ಧಧರ್ಮದ ಇತಿಹಾಸದಲ್ಲಿ ಸುವರ್ಣಯುಗ ಎನ್ನಲಾಗುತ್ತದೆಯಾದರೂ, ಇಕ್ವಾಕ್ಷು ರಾಜರಾರೂ ಯಾವುದೇ ಬೌದ್ಧ ಸಂಸ್ಥೆಗಳನ್ನು ಪೋಷಿಸಿದರೆಂಬುದಕ್ಕೆ ಯಾವುದೇ ಪುರಾವೆಗಳಿಲ್ಲ. ಇಕ್ಷ್ವಾಕು ಅಂತಃಪುರದ ಸ್ತ್ರೀಯರು 'ಬೌದ್ಧಧರ್ಮವನ್ನು ಪೋಷಿಸಲು ಸ್ಪರ್ಧಿಸಿದರು' ಎಂಬ ಹೇಳಿಕೆಯಲ್ಲಿ ಯಾವುದೇ ಸತ್ಯ ಇಲ್ಲವೆನ್ನಲಾಗದು. ಇಲ್ಲಿಯೂ ಸಹ ಒಂದು ವೈಶಿಷ್ಟವು ಕಾಣಿಸಿಕೊಳ್ಳುತ್ತದೆ. ಇಕ್ಷ್ವಾಕು ರಾಜರು ಬೌದ್ಧ ಸಂಸ್ಥೆಗಳಿಗೆ ನೀಡಿದ ಹೆಚ್ಚಿನ ದಾನಗಳನ್ನು ವೀರ ಪುರುಷದತ್ತನ ಆಳ್ವಿಕೆಯ ಆರನೇ ವರ್ಷದಲ್ಲಿ ದಾಖಲಿಸಲಾಗಿದೆ. ಅವುಗಳಲ್ಲಿ ಎರಡು ಶಾಸನಗಳು, ವೀರಪುರುಷದತ್ತನಿಗೆ ವಿಜಯ, ಆರೋಗ್ಯ ಮತ್ತು ದೀರ್ಘಾಯುಷ್ಯವನ್ನು ಕೋರುತ್ತ ಬೌದ್ಧವಿಹಾರಗಳಿಗೆ ನೀಡಿದ ದೇಣಿಗೆಗಳನ್ನು ಉಲ್ಲೇಖಿಸುತ್ತವೆ. ಈ ಅವಧಿಯಲ್ಲಿ, ಬುದ್ಧನು ಶ್ರೀಪರ್ವತದಲ್ಲಿ ಭಕ್ತರ ಇಷ್ಟಾರ್ಥಗಳನ್ನು ಪೂರೈಸುವ ಮಹಾನ್‌ಕಾರುಣಿಕನಾದ ಭಗವಂತನಾಗಿ ರೂಪುಗೊಂಡನು. ಇಲ್ಲಿ, ವೀರಪುರುಷದತ್ತನ ಆಳ್ವಿಕೆಯ ಆರನೆಯ ವರ್ಷದಲ್ಲಿ ಶತ್ರುಗಳ ಆಕ್ರಮಣವು ಅವನ ರಾಜ್ಯಕ್ಕೆ ಅಥವಾ ಅನಾರೋಗ್ಯದಿಂದ ಅವನ ಜೀವಕ್ಕೆ

ದೊಡ್ಡ ಅಪಾಯವನ್ನುಂಟುಮಾಡಿದೆ ಎಂದೂ, ಆದ್ದರಿಂದಲೇ ರಾಜರೂ, ಅರಮನೆ ವನಿತೆಯರು ಸಮೀಪದ ಭಗವಾನ್ ಬುದ್ಧನ ಮೇಲೆ ಅಪಾರ ಭಕ್ತಿಶ್ರದ್ಧೆಯನ್ನು ತೋರಿಸಿದ್ದಾರೆ ಎಂಬ ಅನುಮಾನಕ್ಕೆ ಎಡೆಮಾಡಿಕೊಟ್ಟಿದೆ.

ಪಲ್ಲವ ರಾಜರಿಗೆ ಬೌದ್ಧ ಧರ್ಮದಲ್ಲಿ ಆಸಕ್ತಿ, ಅಭಿಮಾನ ಇರಲಿಲ್ಲ. ಅವರು ಪಂಚಮಲೋಕದ ಅಧಿಪತಿಗಳಾದ ಧರ್ಮಮಹಾರಾಜರು; ಅವರು ಧರಿಸಿದ್ದ 'ಕಲಿಯುಗ ದೋಷವಸನ್ನ ಧರ್ಮೋದ್ಧಾರಣ ನಿತ್ಯ ಸನ್ನದ್ಧ' ಎಂಬ ಬಿರುದು ಬೌದ್ಧಧರ್ಮದ ವಿರುದ್ಧ ಅವರ ಪ್ರತಿಭಟನೆಯನ್ನು ಸಂಕೇತಿಸುತ್ತದೆ. ವಿಷ್ಣುಕುಂಡಿನ ಎರಡನೆಯ ಮಾಧವವರ್ಮನು ಏಕಾದಶಾಶ್ವಮೇಧ ಪುರುಷಮೇದಗಳಿಂದ ಶತ ಸಹಸ್ತ್ರಯಾಜಿಯ ಪಾರಮ್ಯವನ್ನು ಸಾಧಿಸಿದ್ದಾಗಿ ಹೇಳಿಕೊಂಡಿದ್ದಾನೆ. ಈತನೇ ಹಿರಣ್ಯಗರ್ಭ ವ್ರತವನ್ನು ಮಾಡಿದನು, ಇದು ಪ್ರಾಯಶ್ಚಿತ್ತದ ಆಚರಣೆಯಂತೆ. ಬಹುಶಃ ಅವನ ತಂದೆ ಗೋವಿಂದವರ್ಮನ ತಾಯಿ ಪರಮ ಭಟ್ಟಾರಿಕ ಮಹಾದೇವಿ ಬೌದ್ಧಧರ್ಮದವರಾಗಿದ್ದ ಕಾರಣ ಮಾಧವವರ್ಮನು ಹಿರಣ್ಯ ಗರ್ಭಪಾತವನ್ನು ಮಾಡಿ ನಂತರ ವೈದಿಕ ವಿಧಿವಿಧಾನಗಳನ್ನು ಮಾಡಿದ್ದಾನೆ. ವೈದಿಕ ಧರ್ಮವನ್ನು ಸಾಕಾರಗೊಳಿಸಿದಂತೆ ತೋರುವ ಈ ರಾಜರು ಬೌದ್ಧಧರ್ಮವನ್ನು ಆರಾಧಿಸಲಿಲ್ಲ ಎಂಬುದು ಸತ್ಯ.

ಕಂದಾರವಂಶದ ರಾಜ ದಾಮೋದರವರ್ಮನು 'ಸಮ್ಯಕ್ಸಂಬುದ್ಧ' ವಾದಾರಕನಾಗಿದ್ದನು. ಆದರೆ ಅವರ ಔದಾರ್ಯ ಬ್ರಾಹ್ಮಣರಿಗೆ ಮಾತ್ರ ಸೀಮಿತವಾದಂತಿದೆ. ವಿಷ್ಣುಕುಂಡಿನ ಗೋವಿಂದವರ್ಮನು ಇಂದ್ರಪಾಲ ನಗರದಲ್ಲಿ ತನ್ನ ರಾಣಿ ಪರಮಭಟ್ಟಾರಿಕಾ ಮಹಾದೇವಿ ನಿರ್ಮಿಸಿದ ಮಠಕ್ಕೆ ಪೆಂಕಪಾರ ಗ್ರಾಮವನ್ನು ದಾನ ಮಾಡಿದನು. ಅವರ ಮೊಮ್ಮಗ ವಿಕ್ರಮೇಂದ್ರವರ್ಮ 'ಪರಮಸುಗತು'ನೇ ಹೊರತು ಆತನ ಬೌದ್ಧಧರ್ಮ ಪೋಷಣೆಯ ಸಂಗತಿಗಳು ಸಿಗುವುದಿಲ್ಲ. ಪ್ರಾಯಶಃ ವಿಷ್ಣು ಗೋವಿಂದವರ್ಮನ ಸಮಕಾಲೀನನಾದ ಗುಣಪಾಶಪುರದಿಂದ ಪಿಠಾಪುರ ಪ್ರದೇಶವನ್ನು ಆಳಿದ ಪೃಥ್ವಿಮೂಲ ರಾಜಕುಮಾರನಾದ ಹರಿವರ್ಮನು ಧರ್ಮನಿಷ್ಠ ಬೌದ್ಧನಾಗಿದ್ದನು. ಅದೂ–ರ್ರಿನಲ್ಲಿ ವಿಹಾರವನ್ನು ಕಟ್ಟಿಸಿ ತಂದೆಯಿಂದ ಕಟ್ಟುಚೆರುವು ಗ್ರಾಮವನ್ನು ಪಡೆದು ವಿಹಾರಕ್ಕೆ ದಾನವಾಗಿ ನೀಡಿದನು. ಸ್ವಯಂ ಪೃಥ್ವಿಮೂಲರಾಜನು ಕಟ್ಟುಚೆರುವು ಗ್ರಾಮವನ್ನು ವಿಹಾರಕ್ಕೆ ಏಕೆ ದಾನ ಮಾಡಲಿಲ್ಲ? ಎಂಬ ಪ್ರಶ್ನೆ ಮೂಡುವುದು ಸಹಜ. ಪೃಥ್ವಿಮೂಲನು ಒಬ್ಬ ಬ್ರಾಹ್ಮಣ ಮತಾಭಿಮಾನಿ. ಶ್ರುತಿ, ಸ್ಮೃತಿವಿಹಿತವಾದ ವರ್ಣಧರ್ಮವನ್ನು ರಕ್ಷಿಸುತ್ತಿದ್ದವನು; ದೇವಗುರು ಬ್ರಾಹ್ಮಣ ಭಕ್ತನೂ ಪರಮ

ಮಹೇಶ್ವರನೂ ಎನಿಸಿಕೊಂಡಿದ್ದನು. ಈ ಎಲ್ಲ ಅಂಶಗಳಿಂದಾಗಿ ಅಂದಿನ ರಾಜರು ವೈದಿಕವಲ್ಲದ ಧರ್ಮಗಳನ್ನು ಆಚರಿಸುವುದು ರಾಜಧರ್ಮವಲ್ಲ ಎಂದು ಪರಿಗಣಿಸಿದಂತೆ ತೋರುತ್ತದೆ.

ಆಂಧ್ರದ ಬೌದ್ಧಧರ್ಮವನ್ನು ಆಚರಿಸಿದವರಲ್ಲಿ ಹೆಚ್ಚಿನವರು ಶೆಟ್ಟಿ, ಗಹಪತಿ ಮತ್ತು ಕರ್ಮಕರ ಪಂಗಡದ ಜನಸಮೂಹ. ಅಮರಾವತಿ, ಭಟ್ಟಿಪ್ರೋಲು, ನಾಗಾರ್ಜುನಕೊಂಡ, ಘಂಟಸಾಲ, ಗುಂಟುಪಲ್ಲಿ ಮುಂತಾದೆಡೆ ದೊರೆತ ಬಹುತೇಕ ಶಾಸನಗಳು ಈ ಸಮುದಾಯಗಳು ನೀಡಿದ ದತ್ತಿಗಳನ್ನು ದಾಖಲಿಸಿವೆ. ಭಟ್ಟಿಪ್ರೋಲು ಮತ್ತು ಅಮರಾವತಿ ಶಾಸನಗಳು 'ನಿಗಮ'ವನ್ನು (ವರ್ತಕಶ್ರೇಣಿ) ಉಲ್ಲೇಖಿಸುತ್ತವೆ. ಘಂಟಸಾಲ ಮತ್ತು ಗುಂಟುಪಲ್ಲಿಯ ಶಾಸನಗಳು ಮಹಾನಾವಿಕರನ್ನು ಉಲ್ಲೇಖಿಸುತ್ತವೆ. ಅಮರಾವತಿ ಶಾಸನಗಳು ಗಥಿಕ (ಸುಗಂಧ ದ್ರವ್ಯ) ಮತ್ತು ಚರ್ಮಕಾರ (ಚಮ್ಮಾರ) ಮುಂತಾದ ಕುಶಲಕರ್ಮಿಗಳ ದಾನ ಧರ್ಮಕಾರ್ಯಗಳನ್ನು ಒಳಗೊಂಡಿವೆ. ವಿಧಿಕನೆಂಬ ಚರ್ಮಕಾರನು ಮತ್ತು ಅವನ ಕುಟುಂಬ ಸಮೇತ ಧಾನ್ಯಕಟಕ ಸ್ತೂಪವನ್ನು ದರ್ಶಿಸಿ, ನೀಡಿದ ದಾನ ಸಂಗತಿಯಿಂದ ಬೌದ್ಧ ಧರ್ಮವು ಜನಸಮೂಹದಲ್ಲಿ ಉಂಟುಮಾಡಿದ್ದ ಸರ್ವಸಮ–ವಿಶ್ವಾತ್ಮಕ (Cosmopolitan) ಭಾವನೆಯನ್ನು ಮಾತ್ರವಲ್ಲದೆ, ಸಮಾಜದ ಕೆಳಸ್ತರದ ಜನರು ಬೌದ್ಧಧರ್ಮದ ಬಗ್ಗೆ ತೋರಿಸುತ್ತಿದ್ದ ಅಭಿಮಾನವನ್ನು ಸಹ ವ್ಯಕ್ತಪಡಿಸುತ್ತದೆ. ರಾಣಿವಾಸದ ಸ್ತ್ರೀಯರು ಮಾತ್ರವಲ್ಲದೆ ಮೇಲ್ಜಾತಿಗಳ ಮಹಿಳೆಯರೂ ಹೆಚ್ಚಿನ ಸಂಖ್ಯೆಯಲ್ಲಿ ಬೌದ್ಧ ಸಂಸ್ಥೆಗಳನ್ನು ಪೋಷಿಸಿದರು. ಅವರು ನೀಡಿದ ದೇಣಿಗೆಯನ್ನು ನೋಡಿದರೆ ಅಂದು ಮಹಿಳೆಯರಿಗೆ ಆರ್ಥಿಕ ಸ್ವಾವಲಂಬನೆ ಇದ್ದಂತೆ ಕಾಣುತ್ತದೆ. ಬೌದ್ಧಧರ್ಮವನ್ನು ಆಧರಿಸಿ ಮತ್ತು ಪೋಷಿಸಿದ ವರ್ಗಗಳಿಂದಾಗಿ ಆಂಧ್ರಪ್ರದೇಶದಲ್ಲಿ ಬೌದ್ಧಧರ್ಮವು ಜನಾಂದೋಲನವಾಗಿ ಹರಡಿತು ಎಂದು ನಮಗೆ ಅರಿವಾಗುತ್ತದೆ.

**ಮೂಲ–ಆಕರ ಗ್ರಂಥದ ವಿವರ:**

1. ಡಾ. ಬಿ. ಎಸ್. ಎಲ್. ಹನುಮಂತರಾವ್ (ದಿವಂಗತ); ಗೌರವ ಪ್ರಾಧ್ಯಾಪಕರು, ಬೌದ್ಧ ಅಧ್ಯಯನ ಕೇಂದ್ರ; ನಾಗಾರ್ಜುನ ವಿಶ್ವವಿದ್ಯಾಲಯ, ಗುಂಟೂರು, ಪ್ರಕಾಶನ: ತೆಲುಗು ಅಕಾಡೆಮಿ, ಹೈದರಾಬಾದ್, ವರ್ಷ: 1994 (ಮೊದಲ ಮುದ್ರಣ), 2014 (ಏಳನೇ ಮುದ್ರಣ).

(ಪ್ರಸ್ತುತ ಮೂಲಕೃತಿಯ ಪುಟ 16ರಿಂದ 24ರ ವರೆಗಿನ ಸಂಶೋಧನ ಬರಹವನ್ನು ಕನ್ನಡಕ್ಕೆ ಅನುವಾದಿಸಲಾಗಿದೆ)